HOPCOMS ಮಳಿಗೆಗಳಲ್ಲಿ ಏಕದರ ನಿಗದಿಪಡಿಸುವುದು

1014 (920) ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ) : ಮಾನ್ಯ ಸಕ್ಕರೆ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಾಗೂ ರಾಜ್ಯದಲ್ಲಿರುವ ಹಾಪ್‌ಕಾಮ್ಸ್ ಮಾರಾಟ ಮಳಿಗೆಗಳ ಸಂಖ್ಯೆ ಎಷ್ಟು;

ಆ) ಈ ಮಾರಾಟ ಮಳಿಗೆಗಳಲ್ಲಿ ಏಕದರ ಮಾರಾಟ ನೀತಿಯನ್ನು ಅನುಸರಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ವಿವಿಧ ಹಾಪ್ ಕಾಮ್ಸ್ ಮಾರಾಟ ಮಳಿಗೆಗಳನ್ನು ತರಕಾರಿ ಹಾಗೂ ಹಣ್ಣುಗಳ ದರಗಳಲ್ಲಿ ವ್ಯತ್ಯಾಸವಿದ್ದು, ಇದನ್ನು ನಿಯಂತ್ರಿಸಲು ಸರ್ಕಾರವು ಕಾರ್ಯಪಡೆಯನ್ನು ರಚಿಸಿದೆಯೇ ಅಥವಾ ಯಾವುದಾದರು ಕ್ರಮಗಳನ್ನು ಕೈಗೊಂಡಿದೆಯೇ;

ಈ) ತರಕಾರಿ ಹಾಗೂ ಹಣ್ಣುಗಳ ಮಾರಾಟ ದರಗಳನ್ನು ಏಕರೂಪವಾಗಿ ನಿಗದಿಪಡಿಸಿ, ಮಾರಾಟ ಮಳಿಗೆಯ ಸೂಚನಾಫಲಕದಲ್ಲಿ ಪ್ರತಿದಿನವೂ ಅಂಟಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಪ್ ಕಾಮ್ಸ್ ಮಾರಾಟ ಮಳಿಗೆಗಳಲ್ಲಿ ಹಣ್ಣು ಹಾಗೂ ತರಕಾರಿಗಳ ಬೆಲೆ ಮಾರುಕಟ್ಟೆಗಿಂತ 10–20% ಹೆಚ್ಚಾಗಿದ್ದು, ಇದರಿಂದ ಜನ ಸಾಮಾನ್ಯರಿಗೆ ಹೊರೆ ಹಾಗೂ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಪ್ ಕಾಮ್ಸ್ ಮಾರಾಟ ಮಳಿಗೆಗಳಲ್ಲಿ ಹಣ್ಣು ತರಕಾರಿಗಳ ದರ ವ್ಯತ್ಯಾಸ ಮಾಡುವ ನೌಕರರ ವಿರುದ್ಧ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಎಸ್. ಎ. ರವಿಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಒಟ್ಟು 276 HOPCOMS ಮಾರಾಟ ಮಳಿಗೆಗಳು ಹಾಗೂ ರಾಜ್ಯದ ಇತರೆಡೆಗಳಲ್ಲಿ 210 ಜಿಲ್ಲಾ HOPCOMS ಗಳ ಮಾರಾಟ ಮಳಿಗೆಗಳು ಇರುತ್ತವೆ.

ಆ) ಬೆಂಗಳೂರು HOPCOMS ಅಧೀನದ ಎಲ್ಲಾ ಮಾರಾಟ ಮಳಿಗೆಗಳಲ್ಲಿ, ಬೆಂಗಳೂರು HOPCOMS ನಿಗದಿಗೊಳಿಸುವ ಏಕದರವನ್ನು ಹಾಗೂ ಇತರೆ ಮಾರಾಟ ಮಳಿಗೆಗಳಲ್ಲಿ ಆಯಾ ಜಿಲ್ಲಾ HOPCOMS ನಿಗದಿ ಪಡಿಸುವ ಏಕದರ ಮಾರಾಟ ನೀತಿಯನ್ನು ಅನುಸರಿಸಲಾಗುತ್ತಿದೆ.

ಇ)

- ಬೆಂಗಳೂರು ಹಾಪ್‌ಕಾಮ್ಸ್ ಸೇರಿದಂತೆ ಎಲ್ಲಾ ಹಾಪ್ ಕಾಮ್ಸ್ ಮಳಿಗೆಗಳಲ್ಲಿನ ಹಣ್ಣು/ತರಕಾರಿಗಳ ದೈನಂದಿನ ದರಗಳಲ್ಲಿ ವ್ಯತ್ಯಾಸವಿಲ್ಲದಂತೆ ಮಾರಾಟ ಮಾಡಲಾಗುತ್ತಿದೆ. ಹಾಗೂ ಈ ಬಗ್ಗೆ ಮೇಲ್ವಿಚಾರಣೆ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ.
- ಬೆಂಗಳೂರು, ಮೈಸೂರು, ಮಂಡ್ಯ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಪ್ ಕಾಮ್ಸ್‌ಗಳಲ್ಲಿ ಒಟ್ಟು 161 ಸಂಖ್ಯೆ ಸ್ಪಾಟ್ ಬಿಲ್ಲಿಂಗ್ ಮೆಷಿನ್‌ಗಳನ್ನು ಅಳವಡಿಸಲಾಗಿದೆ.
- ಗ್ರಾಹಕರ ಮಾಹಿತಿಗೆ ದೈನಂದಿನ ಹಣ್ಣು/ತರಕಾರಿಗಳ ವಿವರ ಗಳನ್ನು ದರ ಪಟ್ಟಿಯಲ್ಲಿ ಪ್ರದರ್ಶಿಸಲಾಗುತ್ತಿದೆ.

ಈ) ಗ್ರಾಹಕರ ಮಾಹಿತಿಗೆ ಹಣ್ಣು/ತರಕಾರಿಗಳ ಆಯಾ ದಿನದ ದರಗಳನ್ನು ದರಪಟ್ಟಿಯಲ್ಲಿ (ಬ್ಲಾಕ್ ಬೋರ್ಡ್) ಮತ್ತು ಕೊರೆಯಚ್ಚು ದರಪಟ್ಟಿಯನ್ನು ಮಳಿಗೆಯ ಮುಂಭಾಗದಲ್ಲಿ ಗ್ರಾಹಕರಿಗೆ ಕಾಣುವಂತೆ ಅಂಟಿಸಿ ಪ್ರದರ್ಶಿಸಲಾಗುತ್ತಿದೆ.

ಉ) ಬೆಂಗಳೂರು ಹಾಪ್‌ಕಾಮ್ಸ್ ಸೇರಿದಂತೆ ಎಲ್ಲಾ ಜಿಲ್ಲಾ ಹಾಪ್ ಕಾಮ್ಸ್‌ಗಳಲ್ಲಿ ಹಣ್ಣು ಮತ್ತು ತರಕಾರಿಗಳನ್ನು ರೈತರಿಂದ ನೇರವಾಗಿ ಖರೀದಿಸಿ ಸಗಟು ಮಾರಾಟ ಬೆಲೆಗಿಂತ 0.50 ಪೈಸೆಯಿಂದ ರೂ.1.00 ರವರೆಗೆ ಹೆಚ್ಚಿನ ದರ ನೀಡಿ ಖರೀದಿಸಲಾಗುತ್ತಿದೆ. ಶೇ. 16 ರಿಂದ 25 % ರವರೆಗೆ ಲಾಭಾಂಶ ವಿಟ್ಟು ಮಾರಾಟ ಮಾಡುತ್ತಿದ್ದರೂ ಸಹ ಹಾಪ್‌ಕಾಮ್ಸ್‌ನ ದರಗಳು ಸಾಮಾನ್ಯ ಮಾರುಕಟ್ಟೆಯ ದರಕ್ಕಿಂತ ಕಡಿಮೆ ಅಥವಾ ಸಮನಾಗಿರುತ್ತದೆ. ಇದರಿಂದ ಜನ ಸಾಮಾನ್ಯರಿಗೆ ಅನಾನುಕೂಲ ಅಥವಾ ಹೊರೆಯಾಗುತ್ತಿಲ್ಲ.

ಇ) ಇಂತಹ ಲೋಪಗಳು ಕಂಡುಬಂದಲ್ಲಿ ಬೆಂಗಳೂರು ಹಾಪ್ ಕಾಮ್ಸ್ ಸೇರಿದಂತೆ ಎಲ್ಲಾ ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ಅಂತಹ ನೌಕರರ ವಿರುದ್ಧ ಅಮಾನತ್ತು ಸೇರಿದಂತೆ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಕೃಷಿ ವಿಜ್ಞಾನ ಕಾಲೇಜುಗಳು

1015 (922) ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೃಷಿ ವಿಜ್ಞಾನ ಕಾಲೇಜುಗಳ ಸಂಖ್ಯೆ ಎಷ್ಟು, ಈ ಕಾಲೇಜುಗಳು ಯಾವ ಯಾವ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತವೆ; ಕೃಷಿ ವಿಶ್ವವಿದ್ಯಾನಿಲಯಗಳ ಹೆಸರು, ಸ್ಥಳ, ಪ್ರತಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಅದಕ್ಕೆ ಅನುಗುಣವಾಗಿ ಬೋಧಕ/ಬೋಧಕೇತರರ ಸಂಖ್ಯೆ ಎಷ್ಟು (ಪೂರ್ಣ ಮಾಹಿತಿ ನೀಡುವುದು);

ಆ) ಈಗಿರುವ ಕೃಷಿ ವಿಜ್ಞಾನ ಕಾಲೇಜುಗಳನ್ನು ಬೇರ್ಪಡಿಸಿ ಹೊಸದಾಗಿ ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ, ಹೊಸ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸುವು ದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವುದಿಲ್ಲವೇ?

ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು, ಧಾರವಾಡ ಮತ್ತು ರಾಯಚೂರುಗಳಲ್ಲಿ ಮೂರು ಕೃಷಿ ವಿಶ್ವವಿದ್ಯಾಲಯಗಳು ಪ್ರಸ್ತುತ ಅಸ್ತಿತ್ವ ದಲ್ಲಿದ್ದು ಈ ಮೂರು ಕೃಷಿ ವಿಶ್ವವಿದ್ಯಾಲಯಗಳಡಿ ಒಟ್ಟು 14 ಕಾಲೇಜು ಗಳಿವೆ. ಉಳಿದ ವಿವರಗಳನ್ನು ಇದರ ಕೆಳಗೆ ವಿಶ್ವವಿದ್ಯಾಲಯಾವಾರು ನೀಡಲಾಗಿದೆ:-